ಈ) ರಾಜ್ಯದಿಂದ ಅಂದಾಜು 3.6 ಲಕ್ಷ ಟನ್ ಕಬ್ಬು ಹೊರ ರಾಜ್ಯಕ್ಕೆ ಕಳುಹಿಸಲಾಗಿದೆ. ದಿನಾಂಕ 15-3-96 ಕ್ಕೆ ಅಂದಾಜು ಮಾಡಿದಂತೆ ಸುಮಾರು 10 ಲಕ್ಷ ಟನ್ ನುರಿಸಬೇಕಾದ್ದು ಇದ್ದು ಇನ್ನೂ ನಾಲ್ಕು ಕಾರ್ಖಾನೆಗಳು ಕಬ್ಬು ಸುರಿಸುತ್ತಿವೆ ಹಾಗೂ ನುರಿಸಲಾಗದೆ ಹಾಳಾದ ಕಬ್ಬಿನ ಬಗ್ಗೆ ವರಿದಯಾಗಿರುವುದಿಲ್ಲ. ಸರ್ಕಾರದ ಹಾನಿಯನ್ನು ತುಂಬಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಕೈಗಾರಿಕೆಗಳಿಗೆ ನೀಡಲಾಗಿರುವ ಇನ್‌ಸೆಂಟಿವ್ ಮೊತ್ತದ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 831 (1144)

ಶ್ರೀ ಡಿ. ಆರ್. ಪಾಟೀಲ್ (ಗದಗ) :- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾರಂಭವಾದ ಬೃಹತ್ ಕೈಗಾರಿಕೆಗಳಿಗೆ ನೀಡಲಾದ ಇನ್‌ಸೆಂಟಿವ್ ಮೊತ್ತ ಎಷ್ಟು?

ಆ) ಯಾವ ಬೃಹತ್ ಕೈಗಾರಿಕೆಗೆ ಅತ್ಯಧಿಕ ಪ್ಯಾಕೇಜ್ ಆಫ್ ಇನ್‌ಸೆಂಟಿವ್ ನೀಡಲಾಗಿದೆ; ಹಾಗೂ ಯಾವ ಬೃಹತ್ ಕೈಗಾರಿಕೆಗೆ ಅತ್ಯಂತ ಕಡಿಮೆ ಇನ್‌ಸೆಂಟಿವ್ ನೀಡಲಾಗಿದೆ?

ಇ) ಎಷ್ಟು ವಿದೇಶಿ ಕಂಪನಿಗಳು ರಾಜ್ಯದಲ್ಲಿ ಈ ಅವಧಿಯಲ್ಲಿ ಕಾರ್ಖಾನೆಗಳನ್ನು ಪ್ರಾರಂಭಿಸುವ ಹಾಗೂ ಅವು ಮಾಡಿರುವ ಬಂಡವಾಳ ಎಷ್ಟು?

ಈ) ಈ ವಿದೇಶಿ ಕಂಪನಿಗಳಿಗೆ ಕೊಟ್ಟ ಸವಲತ್ತುಗಳು ಹಾಗೂ ರಿಯಾಯಿತಿಗಳು ಯಾವುವು?

ಉ) ಸ್ವದೇಶಿ ಉದ್ಯಮಗಳಿಗೆ ಹೋಲಿಸಿದರೆ ಈ ಸವಲತ್ತುಗಳಲ್ಲಿ ಯಾವ ವಿಶೇಷತೆ ಇದೆ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು) :-

ಅ) 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೀಡಲಾದ ಬಂಡವಾಳ ಸಹಾಯಧನ ಮತ್ತು ರೂ. 7-00 ಕೋಟಿಗಳು.

ಆ) 1995-96 ರ ಸಾಲಿನಲ್ಲಿ ಒಟ್ಟು 9 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಗರಿಷ್ಠ ರೂ. 25 ಲಕ್ಷ ಸಹಾಯ ಧನವನ್ನು ನೀಡಲಾಗಿದೆ (ಪಟ್ಟಿಯನ್ನು ಲಗತ್ತಿಸಲಾಗಿದೆ.)

ಒಂದು ಘಟಕಕ್ಕೆ ಕನಿಷ್ಠ ರೂ. 64,000-00 ಗಳ ಸಹಾಯ ಧನವನ್ನು ನೀಡಲಾಗಿದೆ (ವಿಸ್ತರಣಾ ಯೋಜನೆಯ ಅಡಿಯಲ್ಲಿ)

೨) 1995-96 ನೇ ಸಾಲಿನಲ್ಲಿ ಒಟ್ಟು 34 ವಿದೇಶಿ ಆರ್ಥಿಕ ಸಹಭಾಗಿತ್ವ ದೊಂದಿಗೆ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿರುತ್ತದೆ ಮತ್ತು ಈ ಕೈಗಾರಿಕೆಗಳು ಒಟ್ಟು ರೂ. 1133.45 ಕೋಟಿಗಳ ಬಂಡವಾಳ ಹೂಡಲಿದೆ.

ಈ) ಇವುಗಳಲ್ಲಿ ಯಾವುವು ಉತ್ಪಾದನೆಯನ್ನು ಇನ್ನೂ ಪ್ರಾರಂಭ ಮಾಡಿರು ವುದಿಲ್ಲ. ಹೊಸ ಕೈಗಾರಿಕಾ ನೀತಿಯನ್ವಯ ಈ ಘಟಕಗಳಿಗೆ ಸಹಾಯ ಸವಲತ್ತುಗಳನ್ನು ಕೊಡಲಾಗುವುದು.

ಉ) ಹೊಸ ಕೈಗಾರಿಕಾ ನೀತಿಯನ್ವಯ ಸ್ವದೇಶಿ ಕಂಪನಿಗಳಿಗೆ ಲಭ್ಯವಿರುವ ಎಲ್ಲಾ ಸವಲತ್ತುಗಳನ್ನು ವಿದೇಶಿ ಕಂಪನಿಗಳಿಗೂ ಕೊಡಲಾಗುವುದು.

Statement showing the details of maximum subsidy released to units (Rs. 25.00 lakhs) each

1. Stiven Solvex, Dharwad.
2. Tulshan Granites, Kolar.
3. Southern Ferro Ltd., Dharwad.
4. Lambodhar Granirtes. Dharwad.
5. K.I.M. Agro mech, Tumkur.
6. Basaveshwara Solvents & pytraction (P) Ltd. Bangarpet Tq. Kolar Dist.
7. Stepen Chemicals, Dharward.
8. Sandur Micro Circuits, Sandur.
9. Vishal Cotspin. Raichur.

Details of the unit to whom a minimum subsidy has been released (Rs. 64,000-00)

1. M/s. Hotel Peacock, Hubli
(Under expension scheme)